ಶ್ರೀ ಜಗದೀಶ್ ಶೆಟ್ಟರ್ : ಇವರು ವ್ಯಕ್ತಿಗಳ ಹಿತಾಸಕ್ತಿ ಸಲುವಾಗಿ ಮುಂದೂಡುತ್ತಿದ್ದಾರೆ. ಆದುದರಿಂದ ದಯಮಾಡಿ ಇಂತಹ ಚುನಾವಣೆಗಳಲ್ಲಿ ಯಾವುದೇ ರಾಜಕೀಯವಿರಬಾರದು, ತಕ್ಷಣ ಚುನಾವಣೆಯನ್ನು ಮಾಡಬೇಕು.

ಶ್ರೀ ಆರ್. ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಇಂತಹ ಚುನಾವಣೆಯಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವುದು ಬಹಳ ದೊಡ್ಡ ತಪ್ಪು. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಈ ರೀತಿಯಾಗಿ ಏನಾದರೂ ಆಗಿದ್ದರೆ ಅದನ್ನು ಸರಿಮಾಡಲು ಪ್ರಯತ್ನ ಮಾಡುತ್ತೇನೆ. ಪೋಲೀಸ್ ಎಸ್.ಪಿ. ಯಾಗಲಿ ಕಮೀಷನರ್ ಆಗಲಿ ಅಂತಹ ಕೇಸಗಳು ಇಲ್ಲದಿದ್ದರೂ ಕೂಡ ತಮಗೆ ಜ್ಞಾಪಕವಿರಬಹುದು. ಶ್ರೀನಿವಾಸಪುರದಲ್ಲಿ ಚುನಾವಣೆಗೆ ಎಲ್ಲಾ ಸಿದ್ದತೆಯನ್ನು ಮಾಡಿಕೊಂಡಿರುವಾಗ ಎಸ್.ಪಿ. ಅವರನ್ನು ಕಳುಹಿಸಿದರು. ಲಾ ಅಂಡ್ ಆರ್ಡರ್ ಪ್ರಾಬ್ಲಂ ಬಂದು ಬಿಡುತ್ತದೆ ಎಂದು ಇದು ಒಂದೂವರೆ, ಎರಡುವರ್ಷಗಳ ಹಿಂದೆ ನಡೆದಂಥಾದ್ದು. it was not necessary. ಅದು ಸುಮ್ಮನೆ, ಯಾವಾಗ ಚುನಾವಣೆಯನ್ನು ಮಾಡುವುದಕ್ಕೆ ಇಷ್ಟವಿರುವುದಿಲ್ಲ ಆಗ ಅವರ ಕೈಯಲ್ಲಿ ಬರೆಸಿಕೊಂಡು ಬರುವುದು ಇದು ಒಳ್ಳೆಯದಲ್ಲ. ಅದನ್ನು ಯಾರೇಮಾಡಲಿ ಅವರಾದರೂ ಮಾಡಲಿ, ನಾವಾದರೂ ಮಾಡಲಿ ಅದಕ್ಕೆ ಒಂದು ತಡೆಯಾಬೇಕಾಗುತ್ತದೆ. ಅದನ್ನು ನಾವು ಪ್ರಯತ್ನ ಮಾಡಿ ತಡೆಯಾಕುತ್ತೇವೆ.

ಅಧ್ಯಕ್ಷರು : ಆಫೀಸರ್ಸ್ ಎಲ್ಲಾ ಮಾಡುತ್ತಾರೆ. That was not a President's election where 15 members should sit together and choose the President.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ವೀರಪ್ಪಮೊಯಿಲಿಯವರು ತಮ್ಮ ಮುಖಾಂತರ ಗಮನ ಸೆಳೆಯುವ ಸೂಚನೆಗೆ ಕೊಡುವಾಗ ನಾನೂ ಕೂಡ ದಸ್ಕತ್ತು ಹಾಕಿ ಅವಕಾಶವನ್ನು ಕೇಳಿದ್ದೆನು. ಅವರು ಗಮನ ಸೆಳೆಯುವ ಸೂಚನೆಯ ಸಂದರ್ಭದಲ್ಲಿ ಬರಲು ಸಾಧ್ಯವಾಗಲಿಲ್ಲ. ನಮಗೆ ಉತ್ತರವನ್ನು ಕೊಟ್ಟರು. ಈಗ ಮೊನ್ನೆ ಸರ್ಕಾರದಿಂದ ಕೂಡ ಉತ್ತರವನ್ನು ಕೊಟ್ಟಿದ್ದರು. ಇದಕ್ಕೆ ವಿಳಂಬವಾಗುವುದಕ್ಕೆ ಕಾರಣವೇನು ಎಂದು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಲು ಅವಕಾಶವನ್ನು ಕೊಡದಿದ್ದರೆ ನಾನು ಏನು ಮಾಡಬೇಕು?

ಅಧ್ಯಕ್ಷರು : ನಿಯಮಾವಳಿಯು ಪ್ರಕಾರ ನಾನು ಅವಕಾಶವನ್ನು ಕೊಡಬೇಕು. ಈಗ ನಾವು ಶೂನ್ಯ ವೇಳೆಯಲ್ಲಿದ್ದೇವೆ. ಈಗ ನಾನು ಶೂನ್ಯ ವೇಳೆಯಲ್ಲಿದ್ದೇವೆ. ಈಗ ನಾನು ಮಾನ್ಯ ವಿರೋಧಪಕ್ಷದವರನ್ನು ಮಾತನಾಡಲು ಕರೆದಿದ್ದೇನೆ.

(3) ಚಾಮರಾಜನಗರದಲ್ಲಿ ದಿನಾಂಕ 21.02.96 ರಂದು ನಡೆದ ಘಟನೆ ಬಗ್ಗೆ

+ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಅತ್ಯಂತ ಗಂಭೀರವಾದದಂಥ ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಚಾಮರಾಜನಗರದಲ್ಲಿ 21.02.96ರಂದು ಈ ರಂಜಾನ್ ಹಬ್ಬವನ್ನು ಮಾಡಿಕೊಂಡು ವಾಪಸ್ಸು ಹೋಗುವಂಥ ಸಂದರ್ಭದಲ್ಲಿ ನಮ್ಮ ಮುಸ್ಲೀಂ ಬಂಧುಗಳು ಕೆಲವರು ಅಪರೂಪಕ್ಕೆ ಆ ಕೆಡ ಈ ಕಡೆ

ಸ್ವಲ್ಪ ಏನೋ ಹೋಗಬೇಕಾದರೆ ಅಶಾಂತಿಯ ವಾತಾವರಣ ಆಯಿತು, ಗೊಂದಲ ಆಯಿತು, ಕೇಸಗಳನ್ನು ಹಾಕಿದ್ದೀರಿ, ಆ ವಿವರವನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ, ನನ್ನ ಉದ್ದೇಶ ಅದಲ್ಲ. ನಾನು ಪ್ರಸ್ತಾಪ ಮಾಡುತ್ತಿರುವಂಥ ಉದ್ದೇಶ ಏನೆಂದರೆ, ಈ ಸಂದರ್ಭದಲ್ಲಿ ಏನು ಗಲಭೆಗಳು ಆಯಿತು, ಗೊಂದಲ ಆಯಿತು. ಅದರ ಬಗ್ಗೆ ಒಂದು ಸಮಾಜದ ಎಲ್ಲಾ ಪ್ರಮುಖರು ಒಂದು ಸತ್ಯಾಗ್ರಹ ಮಾಡಿ ಇದು ತನಿಖೆಯಾಗಬೇಕು ಎಂದು ಕಾರ್ಯಕ್ರಮ ನಡೆಸುತ್ತಾ ಇದ್ದರು. ಅಲ್ಲಿರುವಂಥ ಅಸಿಸ್ಟೆಂಟ್ ಕಮಿಷನರ್ ರವರು ಶಾಂತಿ ಸಭೆಯನ್ನು ಕರೆದರು. ಅಲ್ಲಿಗೆ ಆರು ಜನ ಪ್ರಮುಖರು ಅದರಲ್ಲಿ ಇಬ್ಬರು ಪುರುಸಭಾ ಸದಸ್ಯರು, ಸುದರ್ಶನಗೌಡ, ಚಿನ್ನಸ್ವಾಮಿ, ಇತರೇ ನಾಲ್ಕು ಜನ. ಸುದರ್ಶನಗೌಡ ಮತ್ತು ಚಿನ್ನಸ್ವಾಮಿ ಈ ಇಬ್ಬರೂ ಸಹ ಬಿ.ಜೆ.ಪಿ.ಗೆ ಸೇರಿದವರು. ಐದಾರು ಜನ ಬಿ.ಜೆ.ಪಿ. ಸದಸ್ಯ ಪ್ರಮುಖರೂ ಸಹ ಆ ಶಾಂತಿ ಸಭೆಯಲ್ಲಿ ಇದ್ದರು. ಶಾಂತಿ ಸಭೆಯಲ್ಲಿ ಇದ್ದಂಥ ವ್ಯಕ್ತಿಗಳನ್ನು, ಯಾವ ಉದ್ದೇಶಕ್ಕೆ ಚುನಾಯಿತ ಪ್ರತಿನಿಧಿಯನ್ನು ಕರೆದರೋ ಆ ಕೆಲಸವನ್ನು ಮಾಡದೆಯೇ ಏಕಾಏಕಿ ಕೋಮುಗಲಭೆಗೆ ತಾವು ಪ್ರಚೋದನೆಯನ್ನು ನೀಡುತ್ತಿದ್ದೀರಿ ಎನ್ನುವಂಥ ಕಾರಣಗಳನ್ನು ನೀಡಿ ಅವರನ್ನು ಅಸಿಸ್ಟೆಂಟ್ ಕಮಿಷನರ್ ರವರು ಬಂಧನ ಮಾಡಿದರು. ನಾನು ಅದರ ಬಗ್ಗೆಯೂ ವಿರೋಧ ಮಾಡುತ್ತಾ ಇಲ್ಲ. ಇಷ್ಟೊಂದು ಕಾನೂನು ಅವ್ಯವಸ್ಥೆ ಇದ್ದು ಭಾರತೀಯ ಜನತಾ ಪಾರ್ಟಿ ಶಾಸಕರು, ಚುನಾಯಿತ ಪ್ರತಿನಿಧಿಗಳ ಮೇಲೆ ಹತ್ತಾರು ಕೇಸುಗಳು, ಸುಳ್ಳು ಮೊಕದ್ದಮೆಗಳು ಇದ್ದರೂ ಸಹ ಒಂದು ವಿಷಯವನ್ನೂ ನಾವು ಇಲ್ಲಿ ಪ್ರಸ್ತಾಪ ಮಾಡಿಲ್ಲ. ಒಂದೆರಡನ್ನು ಪ್ರಸ್ತಾಪ ಮಾಡುವುದಕ್ಕೆ ಪ್ರಯತ್ನ ಮಾಡಿದೆವು, ಇನ್ನು ಮುಂದೆ ಆ ರೀತಿ ಆಗದರೀತಿ ತಾವು ನೋಡಿಕೊಳ್ಳುತ್ತೀರಿ ಎನ್ನುವಂಥ ವಿಶ್ವಾಸದಿಂದ ನಾವು ಸುಮ್ಮನಾದೆವು. ಅದು ಆಗಲಿಲ್ಲ ಎಂದು ಕಂಡಾಗ ಹತ್ತಾರು ಉದಾಹರಣೆಗಳು ಇದ್ದರೂ ಸಹ ನಾವು ಈ ಸದನದ ಗಮನಕ್ಕೂ ತರದೆಯೇ ಮೌನವಾಗಿ ನಾವು ಇದ್ದೇವೆ, ತಮಗೆ ಮನಬಂದಂತೆ ಹೇಗೆ ಬೇಕಾದರೂ ತಾವು ಆಡಳಿತ ನಡೆಸಬಹುದು ಎಂಬ ಒಂದು ದೃಷ್ಟಿಯಿಂದ ಜನ ತೀರ್ಮಾನ ಮಾಡಲಿಲ್ಲ. ಆದರೆ ಇಲ್ಲಿ ನಡೆದಿರುವುದೇನು ಸನ್ಮಾನ್ಯ ಅಧ್ಯಕ್ಷರೆ, ಶಾಂತಿ ಸಭೆಗೆ ಬಂದಂತಹವರನ್ನು ಬಂಧನ ಮಾಡಿದರು. ಅಸಿಸ್ಟೆಂಟ್ ಕಮಿಷನರ್ ಅಲ್ಲಿ ಮ್ಯಾಜಿಸ್ಟ್ರೇಟ್ ಆಗಿದ್ದರು, ಹೇಗೆ ಒಂದು ರಾಜಕೀಯ ಪ್ರೇರಣೆಗೆ ಅಧಿಕಾರಿಗಳು ಒಳಪಡುತ್ತಿದ್ದಾರೆ, ಆ ಕಪಿಮುಷ್ಟಿದೆ ಸಿಕ್ಕಿಬಿದ್ದಿದ್ದಾರೆ ಅಂದರೆ ಇದಕ್ಕಿಂತ ನಿಮಗೆ ತಾಜಾ ಉದಾಹರಣೆ ಸಿಗುವುದಿಲ್ಲ. ಬಂಧನ ಮಾಡಿದಂಥ ಏಳು ಜನ ಮೈಸೂರು ಜೈಲಿನೊಳಗೆ ಅಮರಣಾಂತ ಉಪವಾಸ ಮಾಡುತ್ತಿದ್ದಾರೆ. ಆ ರೀತಿ ಉಪವಾಸ ಮಾಡುತ್ತಿರುವುದಾದರು ಏಕೆ? ಶಾಂತಿಸಭೆಗೆ ಹೋದಂಥ ನಮ್ಮನ್ನು ಬಂಧನ ಮಾಡಿದಿರಿ, ನಮ್ಮನ್ನು ಹೊರಗೆ ಬರಲಾರದಂಥ ಷರತ್ತುಗಳನ್ನು ಹಾಕಿ, ನಮ್ಮಮೇಲೆ ರಾಜಕೀಯ ದ್ವೇಷಗಳನ್ನು ತೀರಿಸಿಕೊಳ್ಳುವುದಕ್ಕೆ ಹೊರಟಿದ್ದೀರಿ ಎಂದು ಹೇಳಿ 26ನೇ ತಾರೀಖಿನಿಂದ ಅವರು ನಿರಂತರವಾಗಿ ಮೈಸೂರಿನ ಜೈಲಿನಲ್ಲಿ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಅವರಿಗೆ ಷರತ್ತನ್ನೇನು ಸ್ವಾಮಿ ಹಾಕಿದ್ದಾರೆ? ಈ ಕಾನೂನಿನ ಚೌಕಟ್ಟಿಗಿಂತ ದೊಡ್ಡವರು ಯಾರೂ ಇಲ್ಲ ಎಂದು ನಾನಾದರೂ ಭಾವಿಸ್ಕಿದ್ದೇನೆ. ನಮಗೆ ಒಂದು ಕೋಡ್ ಆಫ್ ಕ್ರಿಮಿನಲ್ ಪ್ರೊಸಿಜರ್ ಇದೆ ಅದರಂತೆ.

MR. SPEAKER : When they are in judicial custody if the bail

application is not before the Magistrate, it is before the Sub-Divisional magistrate. ಅಂದರೆ ಅವರು ಜ್ಯುಡಿಷಿಯರಿ ಒಳಗೆ ಬರುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನ್ಯಾಯವಾಗಿ ಅವರು ಹಾಗೆ ನೇರವಾಗಿ ಜೈಲಿಗೆ ಕಳುಹಿಸಿದಂಥ ಉದಾಹರಣೆಗಳು ಅಪರೂಪ. ಶಾಂತಿ ಹೆಸರಲ್ಲಿ ಅವರು ಬಂದಂಥದ್ದು. ಆ ಒಬ್ಬ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟರ್ ಷರತ್ತು ಹಾಕಿದ್ದಾರೆ, ಆರೋಪಿಗಳಾದ ನೀವು ಹತ್ತು ಸಾವಿರ ರೂಪಾಯಿಗಳ ಬಾಂಡನ್ನು ಮೂರು ವರ್ಷಗಳ ಅವಧಿಗೆ ಉತ್ತಮ ನಡವಳಿಕೆಯ ಬಗ್ಗೆ ನೀಡತಕ್ಕದ್ದು. ಹಾಗೂ ಚಾಮರಾಜನಗರ ಪಟ್ಟಣಕ್ಕೆ ಸೇರಿದ, ಚಾಲ್ತಿ ತಿಂಗಳಿನಲ್ಲಿ ಒಂದು ಲಕ್ಷ ರೂಪಾಯಿಗಳ ಮೌಲ್ಯದ ಸಾಲ್ವೆನ್ಸಿ ಸರ್ಟಿಫಿಕೇಟ್ ಹೊಂದಿರುವ ವ್ಯಕ್ತಿಯ ಜಾಮೀನನ್ನು ಪಡೆಯತಕ್ಕದ್ದು. ಹಾಗೂ 15 ವರ್ಷಗಳಿಂದ ಚಾಮರಾಜನಗರ ಪಟ್ಟಣದಲ್ಲಿ ವಾಸಿಸುತ್ತಿರುವ ಇಬ್ಬರು ಗೌರವಾನ್ವಿತ ಮುಸಲ್ಮಾನ್ ಜಾತಿಯ ವ್ಯಕ್ತಿಗಳ ಜಾಮೀನನ್ನು ನೀಡತಕ್ಕದ್ದು ಅನಿವಾರ್ಯವೆಂದು ಈ ನ್ಯಾಯಾಲಯವು ಅಭಿಪ್ರಾಯ ಹೊಂದಿರುವುದರ ವಿರುದ್ಧ ನಿಮ್ಮ ನಿಮ್ಮ ಹೇಳಿಕೆ ಏನಾದರೂ ಇದ್ದಲ್ಲಿ ನೀಡತಕ್ಕದ್ದು ಎಂದು ಕೇಳಿ ಈ ಷರತ್ತುಗಳನ್ನು ಹಾಕಿ ಜೈಲಿಗೆ ಕಳುಹಿಸಿಬಿಟ್ಟರು. ಸ್ವಾಮಿ, ನನಗೆ ಗೊತ್ತಿದೆ, ನಮ್ಮ ದೇಶದ ಇತಿಹಾಸದಲ್ಲಿ ಯಾವುದೇ ಒಬ್ಬ ಸಬಡಿವಿಜನ್ ಮ್ಯಾಜಿಸ್ಟ್ರೇಟ್ ಹೈಕೋರ್ಟ್, ಸುಪ್ರೀಂಕೋರ್ಟ್ ಯಾವ ವ್ಯಕ್ತಿ ಸಹ, ಯಾರೂ ಸಹ ಯಾವುದೇ ವ್ಯಕ್ತಿ ಬಗ್ಗೆ ಒಂದು ಜನಾಂಗದ ವ್ಯಕ್ತಿಗಳ ಜಾಮೀನನ್ನು ಕೊಡಬೇಕೆಂದು ಹೇಳಿ ಹೇಳುವಂಥ ಉದ್ಧಟತನದ ತೀರ್ಮಾನವನ್ನು ಈ ಷರತ್ತಿನಲ್ಲಿ ಹಾಕಿದ್ದಾರೆ ಎಂದು ನಾನು ಎಂದಾದರೂ ಭಾವಿಸಲಿಲ್ಲ. ಸನ್ಮಾನ್ಯ ಅಧ್ಯಕ್ಷರೇ, ಎರಡನೆಯದು, ಸುಪ್ರೀಕೋರ್ಟಿನ ಡಿಸಿಷನ್ ಇದೆ. ಯಾವುದೇ ಸಂದರ್ಭದಲ್ಲಿ ಈ ರೀತಿ ಜಾಮೀನನ್ನ ಯಾವುದೇ ಕೋರ್ಟ ಪಡೆಯುವಂಥ ಇಂತಹ ಜನಾಂಗದ, ಇಂತಹ ಜಾತಿಯವರ ಜಾಮೀನನ್ನು ಪಡೆಯಬೇಕು ಎಂದು ಹೇಳಬಾರದು ಎನ್ನುವಂಥ ಸ್ಪಷ್ಟವಾದಂಥ ಆದೇಶ ಇದೆ. ಇದು ಒಂದು ಎರಡನೆಯದು, ಕೋಡ ಆಫ್ ಕ್ರಿಮಿನಲ್ ಪ್ರೊಸಿಜರ್ ಅಂಡರ್ 9 ಪ್ರಕಾರ Security for good behaviour from suspected persons ಎಂದು ಇದೆ. ಅವನು ಏನು ಹೇಳುತ್ತಾನೆ,

..... the Magistrate may, in the manner hereinafter provided, require such person to show cause why he should not be ordered to execute a bond, with or without securities, for his good for such period, not exceeding one your, as the Magistrate thinks fit'.

ಸ್ವಾಮಿ, ಮೂರು ವರ್ಷ ಏತಕ್ಕೆ ಇದೆ? ಮೂರು ವರ್ಷವೂ ಇದೆ ಡ್ರಗನ್ ಅವ್ಯವಹಾರ ಮಾಡಿದ್ದರೆ, ಫುಡ್ ಅಡಾಲ್ಟ್ರೇಷನ್ ಏನಾದರೂ ನಡೆಸಿದ್ದರೆ; Essential Commodities Act ವಿರುದ್ಧವಾಗಿ ನಡೆದಿದ್ದರೆ ಸೆಕ್ಷನ್ 110 ಪ್ರಕಾರ ಅವನು ಹೇಳುತ್ತಾನೆ, ಅಂತಹ ಸಂದರ್ಭದಲ್ಲಿ ಅವನ ಗುಡ್ ಬಿಹೇವಿಯರಗೆ ಮೂರು ವರ್ಷದ ಬಾಂಡನ್ನು ಡಿಮ್ಯಾಂಡ್ ಮಾಡಬಹುದು ಎಂದು. ಶಾಂತಿ ಭಂಗ ಆಯಿತು ಎಂದು ಕೇಸ್ ಬುಕ್ ಮಾಡುತ್ತೀರಿ, ವಿನಾಕಾರಣ ಕೇಸ್ ಬುಕ್ ಮಾಡುತ್ತೀರಿ, ಅವರು

ಚುನಾಯಿತ ಪ್ರತಿನಿಧಿಗಳಿದ್ದಾರೆ. ಆ ಮ್ಯಾಜಿಸ್ಟ್ರೇಟರಿಗೆ ಅಲ್ಲಿ ಒಂದು ಸೌಹಾರ್ದಯುತವಾದ ವಾತಾವರಣ ಹಾಗೂ ಮುಸ್ಲಿಂ ಹಿಂದು ಅಣ್ಣತಮ್ಮಂದಿರಾಗಿ ಬದುಕಬೇಕು ಎಂಬ ಕಳಕಳಿ ಆ ಮನುಷ್ಯನಿಗೆ ಇದ್ದಿದ್ದರೆ ಆ ರೀತಿ ಮುಸ್ಲೀಂ ಬಂಧುಗಳಿಂದ ಜಮೀನು ಪಡೆಯುವುದು ಎಂದು ಹೇಳುವಂಥ ಉದ್ಧಟತನದ ಮಾತು ಆಡಬೇಕಾಗಿತ್ತೇ? ಎರಡನೆಯದು, ಒಂದು ವರ್ಷ ಸಾಕು ಬಾಂಡಗೆ ಎನ್ನುವುದನ್ನು ಮೂರು ವರ್ಷ ಬೇಕು ಎಂದು ಕೇಳುವಂಥದ್ದು. ಸಾಲ್ವೆನ್ಸಿ ಸರ್ಟಿಫಿಕೇಟ್ ಒಂದು ಲಕ್ಷ ಈ ತಿಂಗಳಿನಲ್ಲಿ ಯಾರಿಗೆ ಇದೆ ಅವನೇ ಜಾಮೀನು ಕೊಡಬೇಕು ಎನ್ನುವಂತದ್ದು ಸರಿಯೇ? ಸನ್ಮಾನ್ಯ ಪಟೇಲರೆ, ಸೇಡು ತೀರಿಸಿಕೊಳ್ಳುವುದಕ್ಕೆ ಮಾಡಿರುವಂಥದ್ದು, ಅಧಿಕಾರಿಯ ಇಬ್ಬರು ಪ್ರಮುಖದ ಮೇಲೆ ಸುಪ್ರೀಂಕೋರ್ಟ್ ಗಡಿಪಾರು ಮಾಡುವುದಕ್ಕೆ ಹೋದರು. ಕೋರ್ಟ್ ಅದನ್ನು ರಿಜೆಕ್ಟಮಾಡಿತು. ಅಂದರೆ ಒಂದುರೀತಿ ಇವರು ಆ ಗಲಾಟೆಯಲ್ಲಿ ಇದ್ದರೆ, ಇಲ್ಲ. ಶಾಂತಿ ಸಭೆಗೆ ಕರೆದಿದ್ದೀರಿ, ಒಂದು ರೀತಿ ಅವರ ಮೇಲೆ ಸೇಡು ತೀರಿಸಿಕೊಳ್ಳುವ ರೀತಿ ಒಂದು ರಾಜಕೀಯ ಪ್ರಚೋದನೆ ಯಾರೇ ಮಾಡಲಿ ಒಬ್ಬ ಅಧಿಕಾರಿ ಅದಕ್ಕೆ ಬೆಲೆ ಕೊಡುತ್ತಾನೆ ಅಂದರೆ ಅದು ಗೌರವ ತರತಕ್ಕಂಥ ಸಂಗತಿಯಲ್ಲ, ಇದನ್ನು ನಾನು ವಿಸ್ತಾರ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅನೇಕ ಜನ ಪ್ರಾಮಾಣಿಕ ಅಧಿಕಾರಿಗಳಿದ್ದಾರೆ. ವಿಶ್ವಾಸಕ್ಕೆ ಧಕ್ಕೆ ಬರುವಂಥ ರೀತಿಯಲ್ಲಿ ಈ ರೀತಿ ಅಧಿಕಾರಿಗಳು ನಡೆದುಕೊಂಡುಬಿಟ್ಟರೆ ಬಹುಶಃ ನಿಮ್ಮ ಸರ್ಕಾರಕ್ಕೂ ಗೌರವ ಬರುವುದಿಲ್ಲ. ದಯಮಾಡಿಸಿ ತರಿಸಿ, ಅವರಿಗೆ ಹಾಕಿರುವಂಥ ಷರತನ್ನು ತೆಗೆದುಹಾಕಿ, ಮತ್ತೆ ಅಲ್ಲೇ ನೀವು ಕೇಸ್ ಹಾಕಿ. ಪಟೇಲರೇ, ನನಗೆ ಗೊತ್ತಿದೆ, ನಾವು ಇಲ್ಲಿ ಮಾಡಬಾರದ ಪಾಪ ಮಾಡಿದ್ದೇವೆ. 1983ರಲ್ಲಿ ಯಾವುದೋ ಕಾರಣಕ್ಕೋಸ್ಕರ, ಎಲ್ಲೋ ಇದ್ದವರಿಗೆ ನಿಮಗೆ ಬೆಂಬಲ ಕೊಟ್ಟು ನೀವು ಮಂತ್ರಿಗಳಾಗಿ, ನೀವು ವೈಭವದಿಂದ ಮೆರೆಯುವಂಥ ದೊಡ್ಡ ಪಾಪ ಮಾಡಿದ್ದಕ್ಕೆ ನಮ್ಮನ್ನೆಲ್ಲಾ ಬಲಿಪಶುಗಳನ್ನಾಗಿ ಮಾಡಿ ಇಲ್ಲಸಲ್ಲದ ಸುಳ್ಳು ಕೇಸುಗಳನ್ನು ಹಾಕುವಂಥ ನೂರಾರು ಉದಾಹರಣೆಗಳನ್ನು ಕೊಡುತ್ತೇನೆ. ಬಹುಶಃ ಅದನ್ನು ವ್ಯಂಗವಾಗಿ..

(ಗೊಂದಲ)

ಇಲ್ಲ. ಇಲ್ಲ. ನನಗೆ ನೂರು ಕೊಡುತ್ತಾರೆ ಇದಕ್ಕೇನು ಹೇಳುತ್ತೀರಿ? ಹೇಳಿ ಜಾಲಪ್ಪನವರೆ ನಿಮ್ಮ ಬಗ್ಗೆ ಗೌರವ ಇದೆ. ದಯಮಾಡಿ ನಿಮ್ಮ ಬಾಯಿಂದ ಆ ಮಾತು ಬರುವುದು ಬೇಡ.

ಶ್ರೀ ಆರ್. ಎಲ್. ಜಾಲಪ್ಪ : ಮಾತನಾಡುವುದನ್ನು ಸ್ವಲ್ಪ ಹದ್ದುಬಸ್ತಿನಲ್ಲಿ ಮಾತನಾಡಿ ಸ್ವಾಮಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರ ಬಗ್ಗೆ ಏನೂ ಮಾತನಾಡುವುದು ಬೇಡ, ನಾನು ನಿಮ್ಮಿಂದ ನಿರೀಕ್ಷೆ ಮಾಡಿರಲಿಲ್ಲ.

1.10 ಪಿ.ಎಂ.

ಶ್ರೀ ವಾಟಾಳ್ ನಾಗರಾಜ್ : ತಾವು ಉತ್ತರ ಕೊಡುವುದಕ್ಕೆ ಮುಂಚೆ ಒಂದು ಮಾತು. ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ನಾನು 3-4 ದಿವಸದ ಹಿಂದೆ ಇದನ್ನು ತಮ್ಮ ಗಮನಕ್ಕೆ ತಂದಿದ್ದೆ. ಒಂದು ಪ್ರಶ್ನೆ,

ಆ ಒಂದು ಕ್ಷೇತ್ರದಲ್ಲಿ ಗಂಭೀರವಾದ ಪರಿಸ್ಥಿತಿ ಯಾವಾಗಲೂ ಇದೆ, ಆ ಗಂಭೀರವಾದ ಪರಿಸ್ಥಿತಿಯನ್ನು ಹೋಗಲಾಡಿಸಿ...

ಅಧ್ಯಕ್ಷರು : ಆತಂಕದ ಪರಿಸ್ಥಿತಿ...

ಶ್ರೀ ವಾಟಾಳ್ ನಾಗರಾಜ್ : ಆತಂಕವಲ್ಲ ಗಂಭೀರನೇ.

ಅಧ್ಯಕ್ಷರು : ಗಂಭೀರ ಅಲ್ಲ. ಗಾಂಭೀರ್ಯವನ್ನು ಕಳೆದುಕೊಂಡಿರತಕ್ಕ ಆತಂಕದ ಪರಿಸ್ಥಿತಿ.

ಶ್ರೀ ವಾಟಾಳ್ ನಾಗರಾಜ್ : ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗಿದೆ ಅಲ್ಲಿ.

ಅಧ್ಯಕ್ಷರು : ಗಂಭೀರ ಎಂದರೆ ಬಹಳ ಉತ್ತಮವಾದ ಅರ್ಥ ಕೊಡುತ್ತದೆ. ಇದು ಉತ್ತಮವಾದ ಅರ್ಥ ಕೊಡುವುದಿಲ್ಲ. ಆತಂಕ, ಟನಷನ್. ಗೌರವವಾಗಿ ಬಳಸತಕ್ಕಂಥಾದ್ದು.

ಶ್ರೀ ವಾಟಾಳ್ ನಾಗರಾಜ್ : ಇಲ್ಲ, ಇಲ್ಲ. ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಹೇಳಿದರೆ ಅದು ಶಾಂತವಾಗಿದೆ ಎಂದು ಅರ್ಥವಲ್ಲ. ನನ್ನ ಅರ್ಥ ಸರಿಯಿಲ್ಲ ಎಂದು ತಾವು ಹೇಳುವುದಾದರೆ ನಿಮ್ಮ ಅರ್ಥಕ್ಕೇ ಬರುತ್ತೇನೆ ನಾನು. ಈಗ ಮೊಯ್ಲಿಯವರು ನಾನು ಆ ವಿಚಾರದಲ್ಲಿ ಬಹಳ ತಜ್ಞ, ಆ ವಿಚಾರದಲ್ಲಿ ನನ್ನ ಅಭಿಪ್ರಾಯ ಕೇಳಿ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ಅವರೇ ಹೇಳಲಿ. ಅಪರೂಪಕ್ಕೆ ಬಂದಿದ್ದೀರಿ. ಒಂದು ಅಭಿಪ್ರಾಯ ಕೊಡುವುದಕ್ಕೆ ನಾವೇನು ಫೀಸ್ ಕೊಡಬೇಕೇ? ಎದ್ದು ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆತಂಕ ಅನ್ನುವ ಶಬ್ದ ಉಪಯೋಗಿಸಬೇಕು ಎಂದು ನೀವು ಹೇಳಿರುವ ಸಲಹೆ ಸರಿ ಇದೆ ಎಂದು ನಾನು ಇರುವಂಥ ಒಂದು ನನ್ನ ಸ್ಥಾನದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಏನು ಸಲಹೆ ಸ್ವಾಮಿ? ಸರಿ ಈಗ ಯಡಿಯೂರಪ್ಪನವರ ಸಲಹೆಯನ್ನೇ ನಾವು ಒಪ್ಪಿಕೊಳ್ಳೋಣ. ಆತಂಕ ಇದೆ ಸರಿಯೇ? ಅದು ಗಂಭೀರ ಅಲ್ಲ. ಆತಂಕ, ಗಂಭೀರ, ಭಯ ಭೀತಿ...

ಶ್ರೀ ಎಂ. ವೀರಪ್ಪ ಮೊಯಿಲಿ : ಏನಾಗಿದೆ ಎಂದರೆ, ಗಂಭೀರವಾಗಿರಬೇಕಾದಂಥ ಪ್ರಸಂಗ ಆತಂಕಕ್ಕೆ ಯಡಿಯೂರಪ್ಪನವರಿಂದ ಅಥವಾ ಅವರ ಅರ್ಥದಿಂದ ಬಂದಿದೆ ಅಷ್ಟೇ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಂಥಹ ಅವಕಾಶಗಳು ಅವರಿಗೆ ಸಿಗುವುದೇ ಬಹಳ ಅಪರೂಪ. ಉಪಯೋಗ ಮಾಡಿಕೊಳ್ಳಲಿ.

ಶ್ರೀ ವಾಟಾಳ್ ನಾಗರಾಜ್ : ಆತಂಕದ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ನಾನು ತಮ್ಮಲ್ಲಿ ಕಳಕಳಿಯಿಂದ ಈ ಸದನದ ಮೂಲಕ ಮಾನ್ಯ ಸರ್ಕಾರಕ್ಕೆ ಒಂದು ಮನವಿಯನ್ನು ಸಲ್ಲಿಸುತ್ತೇನೆ ಎಂದು ಹೇಳಿದರೆ, ಈ ಪರಿಸ್ಥಿತಿ ಉದ್ಭವವಾಗುವುದಕ್ಕೆ ಅವಕಾಶ ಕೊಡಬಾರದಾಗಿತ್ತು. ನಾನು ಮೊದಲಿನಿಂದಲೂ

ಹೇಳುತ್ತಿದ್ದೇನೆ, ಪೋಲೀಸರ ವ್ಯವಸ್ಥೆಯನ್ನು ಬಹಳ ಹೆಚ್ಚಿನ ರೀತಿಯಲ್ಲಿ ಮಾಡಬೇಕಾಗಿತ್ತು. ಯಾವುದೇ ಜನಾಂಗದವರು ಒಬ್ಬರ ಮೇಲೆ ಒಬ್ಬರು ಬಿದ್ದು ಈ ಒಂದು ಆತಂಕದ ಪರಿಸ್ಥಿತಿ ನಿರ್ಮಾಣ ಆಗಿದೆ, ಈ ನಿರ್ಮಾಣ ಆಗಬಾರದಾಗಿತ್ತು ಎನ್ನುತಕ್ಕಂಥಾದ್ದಕ್ಕೆ ಮೊದಲಿನಿಂದಲೂ ನನ್ನ ಒತ್ತಾಯ ಇದೆ. ಅದಕ್ಕೆ ಈಗ ಎಲ್ಲಾ ವರ್ಗದವರನ್ನು ಕರೆದು, ಕುಳಿತು, ಆ ಒಂದು ಕ್ಷೇತ್ರದಲ್ಲಿ ಶಾಂತಿಗೆ ಭಂಗವಾಗದ ರೀತಿಯಲ್ಲಿ ಶಾಂತಿಯ ನಿರ್ಮಾಣವಾಗುವ ರೀತಿಯಲ್ಲಿ ಸರ್ಕಾರ ಎಲ್ಲಾ ರೀತಿಯ ಪ್ರಾಮಾಣಿಕ ಪ್ರಯತ್ನವನ್ನು ತಾವು ಮಾಡಬೇಕು ಎಂದು ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಆ ರೀತಿ ಆಗಲಿಲ್ಲ ಎಂದರೆ, ಇದು ಬಹಳ ಅತ್ಯಂತ ಮಹತ್ತರವಾದುದು ಎಂದು ತಾವು ತೀರ್ಮಾನ ತೆಗೆದುಕೊಳ್ಳಬೇಕು. ಏಕೆಂದರೆ ಈಗಾಗಲೇ ಒಂದು ವಾರದಿಂದ ಇದು ಒಳಗೇ ನಡೆಯುತ್ತಿದೆ, ಬೆಂಕಿಯಬೂದಿಯ ಒಳಗೆ ಕೆಂಡ, ಆ ಪರಿಸ್ಥಿತಿ ನಿರ್ಮಾಣವಾಗಿದೆ ಇಲ್ಲಿ. ಅದಕ್ಕೆ ತಮಗೆ ನಾನು ಹೇಳುತ್ತೇನೆ, ಇದು ಯಾವುದನ್ನೂ ಜಾಸ್ತಿ ಮಾಡಿದರೂ ಒಂದಕ್ಕೊಂದು ಬೇರೆ ರೂಪ ತಾಳುತ್ತದೆ. ಇದು ಯಾವುದನ್ನೂ ಜಾಸ್ತಿ ಮಾಡಿದರೂ ಒಂದಕ್ಕೊಂದು ಬೇರೆ ರೂಪ ತಾಳುತ್ತದೆ. ಆದ್ದರಿಂದ ಆ ರೂಪಕ್ಕೆ ಅವಕಾಶ ಕೊಡದ ರೀತಿ, ಶಾಂತಿಯನ್ನು ಕಾಪಾಡುವುದಕ್ಕೋಸ್ಕರವಾಗಿ, ಸರ್ಕಾರ ಪ್ರಾಮಾಣಿಕವಾಗಿ ಒಳ್ಳೆಯ ಅಧಿಕಾರಿಗಳನ್ನು ಅಲ್ಲಿ ಬಿಟ್ಟು, ಆ ಶಾಂತಿಯನ್ನು ಕಾಪಾಡುವುದಕ್ಕೆ ಅಲ್ಲಿ ಏನೇನು ಬೇಕು, ಮತ್ತು ಯಾವ ಜನಾಂಗಕ್ಕೆ ಯಾರ್ಯಾರಿಗೆ ಅನ್ಯಾಯವಾಗಿದೆ, ಅವರನ್ನೆಲ್ಲಾ ಕರೆಸಿ, ಕುಳಿತು ಮಾತನಾಡಿ ಒಂದು ಒಳ್ಳೆಯ ಶಾಂತ ವಾತಾವರಣ ಬರುವುದಕ್ಕೆ ತಾವು ಅವಕಾಶ ಕೊಡಬೇಕು. ಈ ರೀತಿಯ ಅಶಾಂತ ವಾತಾವರಣವನ್ನು ನಿರ್ಮಾಣ ಮಾಡುವುದಕ್ಕೆ ಸರ್ಕಾರ ಎದೆ ಕೊಡಬಾರದು, ಸರ್ಕಾರ ಈ ಬಗ್ಗೆ ತೀವ್ರವಾದಂಥ ಗಮನವನ್ನು ಕೊಡಬೇಕು ಎಂದು ನಾನು ತಮ್ಮ ಮೂಲಕ ಸರ್ಕಾರವನ್ನು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.'

+ ಶ್ರೀಮತಿ ಪ್ರಮೀಳ ನೇಸರ್ಗಿ (ಚಾಮರಾಜಪೇಟೆ) : ಸನ್ಮಾನ್ಯ ಸಭಾಧ್ಯಕ್ಷರೇ, ನನ್ನ ಕೋರ್ಟಿನಲ್ಲಿ ಇದುವರೆಗಿನ ಇತಿಹಾಸದಲ್ಲಿ ಯಾವುದೇ ಕಾಮೆಂಟರಿ, ಈ ಸುಪ್ರೀಮ್ ಕೋರ್ಟಿನ ಆದಿಯಾಗಿ ಯಾವುದೇ ರೀತಿಯಲ್ಲಿ 107 ಪ್ರಿಸಿಡೆಂಟ್ಸ್ ಆಗಲಿ, 110 ಆಗಲೀ, ಯಾವುದೇ, ಅದು ಜನಾಂಗದವರು ಷ್ಯೂರಿಟಿ ಕೊಡಬೇಕು ಎಂಬ ಯಾವುದೇ ಕೋರ್ಟ ತೀರ್ಮಾನ ಕೊಟ್ಟಿಲ್ಲ. ಇದೇ ಪ್ರಪ್ರಥಮವಾಗಿ ಅಸಿಸ್ಟೆಂಟ್ ಕಮೀಷನರರವರು, ಈ ರೀತಿ ತೀರ್ಮಾನಿಸಿರುವುದಿಲ್ಲ ಎಂದು ನನಗನ್ನಿಸುತ್ತದೆ; ಸಭಾಧ್ಯಕ್ಷರೇ, 110 ಪ್ರೊಸೀಜರ್ ಅನ್ನು ತಾವು ನೋಡಬೇಕು. ಫಸ್ಟಕ್ಲಾಸ್ ಮ್ಯಾಜಿಸ್ಟ್ರೇಟರಿಗೆ ಕೊಡತಕ್ಕಂಥ ಅಧಿಕಾರ ಇರತಕ್ಕಂಥಾದ್ದು. ನೀವು ಏನು ಡೆಲಿಗೇಟ್ ಮಾಡಿದಿರಿ, ಅದೇನು ಮಾಡಿದಿರಿ ನನಗೆ ಅದು ಗೊತ್ತಿಲ್ಲ ಆದರೆ ಕಾನೂನಿನಲ್ಲಿ 1973ರಲ್ಲಿ ಕ್ರಿಮಿನಲ್ ಪ್ರೊಸೀಜರ್ ಕೋಡನ್ನು ಅಮೆಂಡಮೆಂಟ್ ಆದಮೇಲೆ 100ನೇ ಸೆಕ್ಷನ್ ಪ್ರಯೋಗ ಮಾಡುವುದಕ್ಕೆ ಫಸ್ಟಕ್ಲಾಸ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟರವರಿಗೆ ಮಾತ್ರ ಅಧಿಕಾರ ಇರತಕ್ಕಂಥಾದ್ದು, ಬೇರೆಯವರಿಗೆ ಇಲ್ಲ. ಈ ಅಸಿಸ್ಟೆಂಟ್ ಕಮೀಷನರವರಿಗೆ ಯಾರು ಪೋಲೀಸ್ ಅಧಿಕಾರ ಕೊಟ್ಟರು? ಆ ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿರುವುದು ಅಷ್ಟೇ ಅಲ್ಲ, ಇವತ್ತಿನ ದಿವಸ ಈ ಎರಡು ಕಮ್ಯುನಿಟಿಗೆ ಸೇರಿರತಕ್ಕಂಥವರೇ ಕೊಡಿ ಒಂದು ಹೇಳತಕ್ಕಂಥಾದ್ದು ತಪ್ಪು, ಬಹಳ ತಪ್ಪು. ಎರಡನೆಯದು, ಒಂದು

ಲಕ್ಷ ರೂಪಾಯಿ ಜಾಮೀನು ಕೊಡಿ ಎಂದು ಹೇಳುತ್ತಾರಲ್ಲಾ, ಈ ವಿಷಯ, ಈ ರಾಮಮಂದಿರದ ಗಲಾಟೆ, ಆಯೋಧ್ಯೆ ಗಲಾಟೆಯಾದಾಗ, ಅಸಿಸ್ಟೆಂಟ್ ಕಮೀಷನರು ಹಾಸನದಲ್ಲಿ ಇದೇ ಪ್ರಕಾರವಾಗಿ ಆರ್ಡರನ್ನು ಮಾಡಿದಾಗ ಅಲ್ಲಿರತಕ್ಕಂಥ ಎಲ್ಲಾ ಅಕ್ಯೂಸ್ಡಗಳು ಬಂದು, ಹೈ ಕೋರ್ಟಿನಲ್ಲಿ ರಿಟ್ ಪಿಟಿಷನ್ ಹಾಕಿದಾಗ ಹೈಕೋರ್ಟಿನಲ್ಲಿ ಈಗಾಗಲೇ ತೀರ್ಮಾನವಾಗಿದೆ. ಈ ರೀತಿ ಒಂದು ಲಕ್ಷ ರೂಪಾಯಿ ಜಾಮೀನು ಕೇಳತಕ್ಕಂಥಾದ್ದು ಈ ಸೆಕ್ಷನನಲ್ಲಿ ಅಧಿಕಾರ ಇಲ್ಲ ಎನ್ನುವುದಕ್ಕೆ ಈಗಾಗಲೇ ನಮ್ಮ ಹೈಕೋರ್ಟಿನಲ್ಲಿ ತೀರ್ಮಾನವಾಗಿದೆ. ಅಷ್ಟೇ ಅಲ್ಲ, ಈ ತೀರ್ಪನ್ನು ಎಲ್ಲರಿಗೂ, ಅಸಿಸ್ಟೆಂಟ್ ಕಮೀಷನರುಗಳಿಗೆ ಕಳುಹಿಸಿ ಕೊಡಬೇಕು ಎಂದು ಹೈಕೋರ್ಟಿನವರು ಕಳುಹಿಸಿ ಕೊಟ್ಟಿದ್ದಾರೆ. ಇಷ್ಟಾದರೂ ಕೂಡ ಇವತ್ತು ಶಾಂತಿ ಸಭೆ, ಎಂದು ಕೆರದು ಅರೆಸ್ಟ್ ಮಾಡುವುದಾದರೆ ಪೀಸ್ ಕಮಿಟಿಗೆ ಹಾಗಾದರೆ ಇನ್ನು ಮೇಲೆ ಯಾರೂ ಹೋಗುವಹಾಗಿಲ್ಲ. ಇಡೀ ದೇಶದಲ್ಲಿ ಇವತ್ತು ನಮ್ಮ ಕರ್ನಾಟಕದಲ್ಲಿ ಪೀಸ್ ಕಮಿಟಿಗೆ ಬನ್ನಿ ಎಂದು ಪೋಲೀಸಿನವರು ಕರೆದರೆ ನಮ್ಮ ಸದಸ್ಯರನ್ನು ಕಳುಹಿಸುವ ಹಾಗೆ ಇಲ್ಲ. ಪೀಸ್ ಕಮಿಟಿಗೆ ಬನ್ನಿ ಎಂದು ಹೇಳಿ ಅದನ್ನು ನೀವು ಅರೆಸ್ಟ ಮಾಡುವುದಾದರೆ ನೀವು ಪೀಸ್ ಕಮಿಟಿಯನ್ನು ಏತಕ್ಕೋಸ್ಕರ ಇಟ್ಟಿದ್ದೀರಿ? ಅದನ್ನು ಅಬಾಲಿಷ್ ಮಾಡಿಬಿಡಿ. ಪೀಸ್ ಕಮಿಟಿ ಕರೆದು, ನಿಮ್ಮನ್ನು ಅರೆಸ್ಟ ಮಾಡುವುದು, ಅರೆಸ್ಟ ಮಾಡಿ ಅಲ್ಲೇ ಆರ್ಡರ್ ಪಾಸ್ ಮಾಡುವುದು, ಇಂಥಹ ಜಾಮೀನು ಕೊಡಿ ಎಂದು ಹೇಳುವುದು. ಇದು ನನಗನ್ನಿಸುತ್ತಿದೆ. ಇದು ಎಲ್ಲದಕ್ಕಿಂತ ಕಾನೂನಿಗೆ ವಿರುದ್ಧವಾಗಿದೆ. ಈ ಅಧಿಕಾರಿ ನಿಜವಾಗಲೂ ಯಾವುದೋ ಒಂದು ದುರುದ್ದೇಶದಿಂದ ಮಾಡಿದ್ದಾನೆ ಎನ್ನುವುದು ಅತಿ ಸ್ಪಷ್ಟವಾಗಿದೆ. ಈ ಕಾರಣದಿಂದ ತಕ್ಷಣ ಈ ಅಧಿಕಾಗಿಯನ್ನು ಅಮಾನತ್ತಿನಲ್ಲಿಟ್ಟು, ಯಾವ ಕಾರಣಕ್ಕೋಸ್ಕರ ಈ ಆರ್ಡರ್ ಮಾಡಿದ್ದಾನೆ ಎನ್ನುವುದನ್ನು ನೀವು ಎ ೈಕ್ವೆರಿ ಮಾಡಬೇಕಾಗುತ್ತದೆ. ಬೇಷರತ್ತಾಗಿ ಇವತ್ತು ಜೈಲಿನಲ್ಲಿ ಏನು ಇಟ್ಟಿದ್ದಾರೆ ನಮ್ಮ ಎಲ್ಲಾ ವ್ಯಕ್ತಿಗಳನ್ನು, ಅವರನ್ನು ಬೇಷರತ್ತಾಗಿ, ಜಾಮೀನು ಇಲ್ಲದೆ ಬಿಡುಗಡೆ ಮಾಡಬೇಕಾದುದು ಸರ್ಕಾರದ ಆದ್ಯಕರ್ತವ್ಯ. ಅದನ್ನು ಮಾಡಬೇಕು ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್ (ಉಪಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ವಾಟಾಳ್ ನಾಗರಾಜರವರು, ಮಾನ್ಯ ಸದಸ್ಯಣಿಯವರು ಹೇಳಿರುವ ಮಾತುಗಳು, ನಾನು ಜೀರೋ ಅವರನಲ್ಲಿ ಕೇಳಿದರೆ ಹೇಗೆ ಹೇಳಲಿ. ನನಗೆ ನೋಟೀಸ್ ಕೊಟ್ಟು ಅಲ್ಲಿಂದ ಮಾಹಿತಿಯನ್ನು ತರಿಸಿ, ಪೋಲೀಸ್ ರಿಪೋರ್ಟ ತರಿಸಿ, ಆ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಪವರನಲ್ಲಿ ಈ ರೀತಿ ಅಕ್ರಮವಾಗಿ ಕಾನೂನು ವಿರುದ್ಧ, ಎಲ್ಲಾ ಶಿಷ್ಟಾಚಾರಕ್ಕೆ ವಿರುದ್ಧವಾಗಿ ಆತ ಹಾಗೆ ಬಿಹೇವ್ ಮಾಡಿದ್ದಾನೆ ಎಂದರೆ, ನಾನು ಏನುಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಸ್ವಲ್ಪ ಕಾನೂನನ್ನು ಕೇಳಬೇಕಲ್ಲಾ. ಆಫ್ ಹ್ಯಾಂಡ್ ಆಗಿ ಹೇಗೆ ಹೇಳಲಿ. ಅದಕ್ಕೆ ಒಂದು ಸಲಹೆ ಕೊಡುತ್ತೇನೆ, ಇದೇ ವಿಷಯವನ್ನು, ಮಾನ್ಯ ಅಧ್ಯಕ್ಷರೇ, ಬೇರೆ ಫಾರಂನಲ್ಲಿ ತಾವು ತಂದರೆ,...

MR. SPEAKER : Since they have already mentioned that matter, you kindly get the information and report the matter to the House.

SRI. J.H. PATEL : If the A.C. has transgressed the powers of the judicial magistrate of if he has committed this mistake by asking a particular community people to produce bonds, we will take action against him as per rule. As far as I know.

ಶ್ರೀ ಹೆಚ್. ಶಿವಪ್ಪ : ಈಗಾಗಲೇ ಪ್ರಮೀಳದವರು ಹೇಳಿದ ಹಾಗೆ ಇದು ಜ್ಯುಡಿಷಿಯಲ್ ಮ್ಯಾಟರ್, ಜ್ಯುಡಿಷಿಯಲ್ ಮ್ಯಾಟರ್ ಆಗಿರುವುದರಿಂದ the accused persons should have preferred an appeal by means of a writ petition.

ಶ್ರೀ ಜೆ. ಹೆಚ್. ಪಟೇಲ್ : ಕಾನೂನು ಪ್ರಕಾರ ಅವರು ಹೇಳುತ್ತಾರೆ.

ಶ್ರೀಮತಿ ಪ್ರಮೀಳ ನೇಸರ್ಗಿ : ಕಾನೂನು ಪ್ರಕಾರ ನಾನು ಹಾಕಿಕೊಳ್ಳುತ್ತೇನೆ. ಇಲ್ಲಿ ನೀವು ಏನು ಮಾಡುತ್ತೀದ್ದೀರಿ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು : ಶಿವಪ್ಪನವರೇ, ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್. ಶಿವಪ್ಪ : ನನ್ನ ಅಭಿಪ್ರಾಯ ನಾನು ವ್ಯಕ್ತಪಡಿಸುತ್ತಿದ್ದೇನೆ, ನೀವು ನನ್ನನ್ನು ಕುಳಿತುಕೊಳ್ಳಿ ಎಂದು ಹೇಳುವ ಹಾಗಿಲ್ಲ. You cannot shut me. I am expressing my views with the permission of the Chair. It is my privilege, you cannot shut me.

MR. SPEAKER : Please preserve your privilege; you can use it in some other form.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಸದನಕ್ಕೆ ಗಮನಕ್ಕೆ ತಂದಿರತಕ್ಕಂಥ ವಿಷಯ. ಅದು ಕಾನೂನು ಪ್ರಕಾರವೇ ಬಹಳ ತಪ್ಪು ಇದೆ. ಆದ್ದರಿಂದ ಅದು ಅಪೀಲ್ ಹೋಗುವುದು ಒಂದೇ ಇದೆ. ಅಪೀಲ್ ಹೋಗಿ ಜ್ಯುಡಿಷಿಯಲ್ ರೆಮಿಡಿಯನ್ನೇ ಕಂಡುಕೊಳ್ಳಲಿ ಎಂದು ನಾನು ಹೇಳುವುದಿಲ್ಲ. ಈ ಸದನದಲ್ಲಿ ಇಂಥಹ ಒಂದು ಇರ್ರೆ ಗ್ಯುಲಾರಿಟಿ, ಮೋಸ್ಪ ಇಲ್ಲೀಗಲ್ ಬಿಹೇವಿಯರ್ ಬಗ್ಗೆ ಹೇಳಿದ್ದಾರೆ. ಅದಕ್ಕೆ ನಾನು ವಿವರಗಳನ್ನು ತರಿಸಿಕೊಳ್ಳುತ್ತೇನೆ. ಅದರ ಬಗ್ಗೆ ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ನಾನು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಕಾನೂನು ಪಂಡಿತರು ಅಲ್ಲದಿದ್ದರೂ ಸಹ ಇಷ್ಟು ವರ್ಷಗಳ ಅನುಭವದಲ್ಲಿ ಈ ತರಹ ಉದಾಹರಣೆಗಳನ್ನು ತಾವು ಕಂಡು ಕೇಳಿದ್ದೀರಾ ಎನ್ನುವಂಥಾದ್ದು. ನಾನು ಏಕೆ ಇದನ್ನು ಹೇಳುತ್ತಿದ್ದೇನೆ ಎಂದರೆ ಇದು ಉದ್ಧಟವಾದಂಥ ವರ್ತನೆ, ಯಾವುದೇ ಸರ್ಕಾರ ಇರಬಹುದು, ಒಂದು ಬೇರೆ ಪಕ್ಷದ ಚುನಾಯಿತ ಪ್ರತಿನಿಧಿಗಳೇ..

ಅಧ್ಯಕ್ಷರು : ನಾನು ತಮ್ಮಲ್ಲಿ ಏನು ಹೇಳುತ್ತೇನೆ ಎಂದರೆ ಸರ್ಕಾರದ ಪಾತ್ರ ಇದರಲ್ಲಿ ಬಹಳ

ಸೀಮಿತವಾಗಿದೆ. ಒಂದು ವೇಳೆ ಒಬ್ಬ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಈ ತೀರ್ಪನ್ನು ಕೊಟ್ಟಿದ್ದರೆ ಅದಕ್ಕೆ ರೆಮಿಡಿಯನ್ನು ನೀವು ನ್ಯಾಯಾಲಯದಲ್ಲೇ ಇನ್ನೊಂದು ಮೇಲ್ಮನವಿ ಮೂಲಕ ಹಾಕಿಕೊಳ್ಳಬಹುದು. ಒಬ್ಬ ಸರ್ಕಾರಿ ನೌಕರ ತನ್ನಲ್ಲಿ ಬರತಕ್ಕಂಥ ಜ್ಯುಡಿಷಿಯಲ್ ಪವರ್ಸ್‌ನ್ನು ಹಾಕಿಕೊಳ್ಳಬಹುದು. ಒಬ್ಬ ಸರ್ಕಾರಿ ನೌಕರ ತನ್ನಲ್ಲಿ ಅಧಿಕಾರದ ವ್ಯಾಪ್ತಿಯನ್ನು ಮೀರಿ, ಯಾವುದು ಕಾನೂನು ಬಾಹಿರವಾಗಿ ಮಾಡಿದ್ದಾನೆ ಎನ್ನುವ ವಿಷಯವನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ಸ್ವಲ್ಪ ಸಮಯ ಅವರಿಗೆ ಕೊಡೋಣ. ತಿಂಗಳುಗಟ್ಟಲೆ, ವಾರಗಟ್ಟಲೆ, ದಿನಗಳಗಟ್ಟಲೆ ಏನೂ ಕೊಡಬೇಕಾಗಿಲ್ಲ. ತಕ್ಷಣ ಹೋಗುತ್ತಾರೆ, ಚೀಫ್ ಸೆಕ್ರೆಟರಿಯನ್ನು ಕರೆಯುಸುತ್ತಾರೆ, they will get the entire report. ನಾಳೆಯೊಳಗಾಗಿ ಅವರು ಹೇಳುತ್ತಾರೆ. ವಿಶ್ವೇಶ್ವರ ಹೆಗಡೆಯವರೇ ನೀವು ನನ್ನನ್ನು ಕ್ಷಮಿಸಬೇಕು, ನಾನು ಇವತ್ತು ನಿಮ್ಮ ವಿಷಯವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಟೈಮ್ ಜಾಸ್ತಿಯಾಯಿತು. ನಾಳೆ ತೆಗೆದುಕೊಳ್ಳೋಣ. ಇಲ್ಲ, ಬಹಳ ಸಮಯವಾಯಿತು, ದಯಮಾಡಿ ಸಹಕರಿಸಿ, I will have to move to the other business. So, you will have to forgive me.

ಶ್ರೀ ವಸಂತ ವಿ. ಸಾಲಿಯಾನ್ : ಮಾನ್ಯ ಅಧ್ಯಕ್ಷರೇ ಒಂದು ನಿಮಿಷ. ಈಗ 4ನೇ ತಾರೀಖಿಗೆ ಬಡ್ಜೆಟ್ ಬರುತ್ತಿದೆ. ಆದ್ದರಿಂದ ನಮ್ಮ ಎಲ್ಲಾ ಶಾಸಕರ ಒಂದು ಮನವಿ ಏನೆಂದರೆ ಶಾಸಕರಿಗೆ ಆಪ್ತ ಸಹಾಯಕರನ್ನು ಕೊಡುವಂಥ ಒಂದು ಯೋಜನೆಯನ್ನು ಸರ್ಕಾರ ಹಾಕಿಕೊಳ್ಳಬೇಕು. ಏಕೆಂದರೆ ಊರಿನಲ್ಲಿ ಮತ್ತು ಇಲ್ಲಿ ಶಾಸಕರುಗಳಿಗೆ ಸಹಾಯ ಮಾಡುವುದಕ್ಕೋಸ್ಕರ ಆಪ್ತ ಸಹಾಯಕರನ್ನು ನೇಮಿಸಲಿಕ್ಕೆ ಬಜೆಟ್‌ನಲ್ಲಿ ಯೋಜನೆ ಹಾಕಿಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ನೀವು ಒಬ್ಬರೇ ಕೇಳುತ್ತಿದ್ದೀರಿ. ಬೇರೆ ಯಾರಿಗೂ ಬೇಡವೇ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಇದು ನಮ್ಮೆಲ್ಲರ ಬೇಡಿಕೆಯಾಗಿದೆ. ಅದು ಕೊಡುವುದು ಒಳ್ಳೆಯದು. ಮಹಾರಾಷ್ಟ್ರದಲ್ಲೂ ಇದು ಇದೆ. ನಮಗೆ ಬಹಳ ಫಜೀತಿಯಾಗಿದೆ. ತಾವು ಅದನ್ನು ಮಾಡಿ.

ಅಧ್ಯಕ್ಷರು : ಪಟೇಲರೇ ಎಲ್ಲಾ ಶಾಸಕರು ಏನು ಹೇಳುತ್ತಿದ್ದಾರೆಂದರೆ, ನಮ್ಮ ಕೆಲಸ ನಿರ್ವಹಣೆ ಮಾಡುವುದಕ್ಕೆ ನಮಗೆ ಅಸಿಸ್ಟೆನ್ಸ ಬೇಕಾಗುತ್ತದೆ ಎಂದು ಸರ್ಕಾರಿ ಸೇವೆಯಲ್ಲಿರತಕ್ಕ ಒಬ್ಬ ಟೈಪಿಸ್ಟ ಅಥವಾ ಒಬ್ಬ ಸ್ಟೆನೋಗ್ರಾಫರ್ ಹೀಗೆ ಯಾರನ್ನಾದರೂ ಒಬ್ಬರನ್ನು ನಮಗೆ ಪಿ.ಎ. ಎಂದು ಹೇಳಿ ಅಟ್ಯಾಚ್ ಮಾಡಿಕೊಡಬೇಕೆಂದು ಕೇಳುತ್ತಿದ್ದಾರೆ. ಕ್ಷೇತ್ರದಲ್ಲಿಯಾಗಲೀ, ಇಲ್ಲಿಯಾಗಲೀ ನಮ್ಮ ಕೆಲಸ ನಿರ್ವಹಣೆ ಮಾಡುವುದಕ್ಕೆ ಕಷ್ಟವಾಗುತ್ತದೆ. During the tenure office, they will choose one person from service ಯಾರೂ ಸರ್ಕಾರಿ ಸೇವೆಯಲ್ಲಿರುತ್ತಾರೆ ಅವರನ್ನು, ಸಂಬಂಧಪಟ್ಟ ಸದಸ್ಯರಿಗೆ ಅಟ್ಯಾಚ್ ಮಾಡಿದರೆ, ಆತನು ಸದಸ್ಯರ ಜೊತೆಗೆ ಇದ್ದು ಅವರ ಎಲ್ಲಾ ಕೆಲಸವನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. That's what you want to say. ಅವರಿಗೆ ಎಕ್ಸಟ್ರಾ, ಕೊಡುವುದಕ್ಕೆ ಬರುವುದಿಲ್ಲ. ಸರ್ಕಾರಕ್ಕೆ ಇದರಿಂದ ಅಷ್ಟೊಂದು ದೊಡ್ಡ ಕೆಲಸ ಆಗುವುದಿಲ್ಲ. ಅಲೋಯೆನ್ಸ ಕಂಟ್ರಾಕ್ಟ ಬೇಸಿಗೆ ಎಂದರೆ it becomes additional liability ಅದು ಬೇಡ.

ಕಂಟ್ರಾಕ್ಟ್ ಬೇಸಿಸ್ ಮೇಲೆ ತೆಗೆದುಕೊಳ್ಳುವುದು ಬೇಡ. This is their demand. I think it is a very reasonable demand.

(INTERRUPTIONS)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ ಕ್ಷೇತ್ರ) : ಮಾನ್ಯ ಅಧ್ಯಕ್ಷರೆ, ಸದಸ್ಯರಿಗೆ ಸಹಾಯಕರನ್ನು ಅಟ್ಯಾಚ್ ಮಾಡುವ ಬಗ್ಗೆ ಈ ಸದನದಲ್ಲಿ ಬಹಳ ಸಾರಿ ಚರ್ಚೆಯಾಗಿತ್ತು. ಯಾರಾದರೂ ಒಬ್ಬರನ್ನು ಸಹಾಯಕರನ್ನು ಕೊಡಬೇಕೆಂಬುದು ಒಂದು ನೀತಿ. ಕೊಡೋಣ ಎನ್ನತಕ್ಕಂಥ ಒಂದು ಭರವಸೆಯನ್ನು ತಾವು ಈ ಸದನದಲ್ಲಿ ಕೊಟ್ಟಿದ್ದಿರಿ. ಅದಕ್ಕೆ ಅವರಿಗೆ ಎಷ್ಟು ಪಗಾರ ಕೊಡುತ್ತೇವೆ ಎನ್ನುವುದನ್ನು ಲೆಕ್ಕ ಹಾಕುವುದಕ್ಕಿಂತ ಹೆಚ್ಚಾಗಿ ನಾವು ಪ್ರಾಮಾಣಿಕವಾಗಿ.

ಅಧ್ಯಕ್ಷರು : ಆ ಸಹಾಯಕರುಗಳಿಗೆ ಸರ್ಕಾರ ಏನು ಸಂಬಳ ಕೊಡುತ್ತಾ ಇದೆ ಅಷ್ಟೇ ಸಂಬಳ. ಎಕ್ಸಟ್ರಾ ಸಂಬಳ ಏನೂ ಇಲ್ಲ. ಒಂದು ವೇಳೆ ಸೆಷನ್ ನಡೆದಾಗ ಬೆಂಗಳೂರಿನಲ್ಲಿ ಇರುತ್ತಾರೆ. That particular Assistant will go and report to them ಸಂಬಂಧಪಟ್ಟ ಸದಸ್ಯರ ಹತ್ತಿರ ಕರೆಸ್ಪಾಂಡೆನ್ಸ್, ಟೈಪಿಂಗ್ ಅಥವಾ ಬೇರೆ ಯಾವುದಾದರೂ ಕೆಲಸ, ಜೊತೆಗೆ ಕ್ಷೇತ್ರದ ಕೆಲಸವನ್ನು ನೋಡಿಕೊಳ್ಳುತ್ತಾರೆ. ತಾಲ್ಲೂಕು ಆಫೀಸನಲ್ಲಿ, ಬಿ.ಡಿ.ಓ. ಆಫೀಸಿನಲ್ಲಿಯೋ ಕೆಲಸ ಮಾಡುವ ಯಾರಾದರೂ ಒಬ್ಬರನ್ನು ಅಪ್ಪ್ ಮಾಡಿರುತ್ತಾರೆ, When they are in the Constitutiancy, that paraticular employee will go and report there, ಅವರ ಕೆಲಸ ಏನು ಇದೆ ಅದನ್ನು ಮಾಡುತ್ತಾ ಹೋಗುತ್ತಾರೆ. It should be helpful. You have lot of experience.

ಶ್ರೀ ಮಂಜುನಾಥ ಸಿ. ಕುನ್ನೂರ್ : ಈ ಅಧಿವೇಶನ ನಡೆದಾಗಲೂ ಕೂಡ ನಾವು ಯಾವುದಾದರೂ ಆಫೀಸ್‌ಗೆ ಹೋಗಬೇಕಾದರೆ ಮುಂಜಾನೆಯಿಂದ ಇಲ್ಲಿಯವರೆಗೆ ಈ ಸದನದಲ್ಲಿಯೇ ಕುಳಿತುಕೊಂಡಿರುತ್ತೇನೆ. ಯಾವುದಾದರೂ ಒಂದು ಕಛೇರಿಗೆ ಕಳುಹಿಸಬೇಕೆಂದರೆ ನಮಗೆ ಆಗುವುದಿಲ್ಲ. ಆದ್ದರಿಂದ ಸಹಾಯಕರನ್ನು ನಮಗೆ ಅಟ್ಯಾಚ್ ಮಾಡಿದರೆ ಬಹಳ ಸಹಾಯವಾಗುತ್ತದೆ.

MR SPEAKER : It is required.

ಶ್ರೀ ಜೆ.ಹೆಚ್. ಪಟೇಲ್ : ಸದಸ್ಯರುಗಳಿಗೆ ಸಹಾಯಕರುಗಳನ್ನು ಅಟ್ಯಾಚ್ ಮಾಡುವುದರಿಂದ ಅವರ ಕಾರ್ಯಕಲಾಪಗಳಿಗೆ, ಮತ್ತು ಡಿಸ್‌ಕಷನ್‌ಗೆ ಬಹಳ ಅವಶ್ಯಕ ಮತ್ತು ಅವರ ಕ್ಷೇತ್ರಗಳ ಕಾರ್ಯನಿರ್ವಹಣೆಗೆ ಅವಶ್ಯಕ ಎಂದು ಅಧ್ಯಕ್ಷರಾದ ತಾವು ಭಾವಿಸಿದರೆ, ಸಭಾನಾಯಕರು ಮತ್ತು ತಾವು ಕುಳಿತು ತೀರ್ಮಾನ ಮಾಡಿದರೆ ಆಯಿತು.

ಅಧ್ಯಕ್ಷರು : ತಾವು ಹೇಳಿದ್ದುದು ಇದು ಉತ್ತರ ಆಗಲೇ ಇಲ್ಲ. ನಾವು ಏನು ತಿಳಿದುಕೊಂಡಿದ್ದೇವೆಂದು ನೀವು ಮತ್ತು ಸಭಾನಾಯಕರು ಇಬ್ಬರೂ ಅವಿಭಾಜ್ಯ ಅಂಗ. ಅವರು ಹೇಳಿದರೆ ನೀವು ಹೇಳಿದಂತೆ, ನೀವು ಹೇಳಿದರೆ ಅವರು ಹೇಳಿದಂತೆ ಆಗುತ್ತದೆ. ನೀವು ಏನಾದರೂ ಸದಸ್ಯರಿಗೆ ಸಹಾಯಕರನ್ನು ಅಟ್ಯಾಚ್ ಮಾಡಿ ಎಂದು ಅಧ್ಯಕ್ಷರು ಹೇಳಿದರು ಎಂದು ಸಭಾನಾಯಕರಿಗೆ ಹೇಳಿದರೆ, ಅವರು ನೀವು ಏಕೆ ಹೇಳಿದಿರಿ ಎಂದು ಕೇಳುವುದಿಲ್ಲ ಎನ್ನುವಂಥ ವಿಶ್ವಾಸ ನಮಗೆ ಇದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಸಭಾನಾಯಕರು ಮತ್ತು ಉಪಮುಖ್ಯಮಂತ್ರಿಗಳು ಒಂದೇ ಧಾಟಿಯಲ್ಲಿ ಮಾತನಾಡತಕ್ಕಂಥವರು. ಎರಡು ಕಿವಿಗಳು ಒಂದೇ, ಹೃದಯ ಒಂದೇ, ಅಂದರೆ ಅವರಿಬ್ಬರೂ ಬಹಳ ಪ್ರೀತಿ ವಿಶ್ವಾಸದಿಂದ ಇರತಕ್ಕಂಥವರು ಈ ವಿಷಯವನ್ನು ಮಾತ್ರ ನಿಮ್ಮ ಮೇಲೆ ಹಾಕಿದ್ದನ್ನು ನೋಡಿದರೆ ನಮಗೆ ಅನುಮಾನ ಬರುತ್ತಿದೆ. ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯದಲ್ಲಿ ಮಾತ್ರ ಭರವಸೆಯನ್ನು ಕೊಡದೆ ಇನ್ನಾರೋ ಮೇಲೆ ಹಾಕತಕ್ಕಂಥದ್ದು ಸರಿಯಲ್ಲ. ಪ್ರತಿಯೊಂದಕ್ಕೂ ಉತ್ತರವನ್ನು ಕೊಟ್ಟುಕೊಂಡು, ಪ್ರತಿಯೊಂದನ್ನು ಒಪ್ಪಿಕೊಂಡು ಇದಕ್ಕೆ ಮಾತ್ರ ಏಕೆ ನೀವು ಹೀಗೆ ಮಾಡುತ್ತೀರಿ?.

ಶ್ರೀ ಜೆ.ಹೆಚ್. ಪಟೇಲ್ : ಬೀಗತನ ಮಾಡಬೇಕೆಂದು ಇಚ್ಛೆ ಇದ್ದರೂ ಯಜಮಾನರು ಬರಲಿ ಎಂದು ಹೇಳುವುದಿಲ್ಲವೇ?

ಅಧ್ಯಕ್ಷರು : ನಂತರ ಉಪಮುಖ್ಯಮಂತ್ರಿಗಳಾದ ತಮ್ಮದೇ ಒಂದು ಬೇಡಿಕೆ ಇದೆ. ಅದೇನೆಂದರೆ ಲೆಜಿಸ್ಲೇಟರ್‌ಗಳಿಗೆ ಒಂದು ಕ್ಲಬ್ ಇರಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ನೀವು 2 ಸಾರಿ ಹೇಳಿದಿರಿ. ಆ ಪ್ರಸ್ತಾವ ಕೂಡ ಹಾಗೆಯೇ ಇದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಸಧ್ಯಕ್ಕೆ ಮಾನ್ಯ ಪಟೇಲರೇ ಯಜಮಾನರೆಂದು ನಾವು ತಿಳಿದುಕೊಂಡಿರುವುದು.

ಅಧ್ಯಕ್ಷರು : ಸಭಾನಾಯಕರು ಬಂದಮೇಲೆ ಉಪಮುಖ್ಯಮಂತ್ರಿಗಳಾದ ನೀವು, ವಿರೋಧ ಪಕ್ಷದ ನಾಯಕರನ್ನು ಮತ್ತು ಎಲ್ಲಾ ಮುಖಂಡರುಗಳನ್ನು ಕರೆದು ಈ ವಿಷಯದ ಬಗ್ಗೆ ಇವತ್ತು ಅಥವಾ ನಾಳೆ 10 ನಿಮಿಷ ಕುಳಿತು We can take a decision about both these matters.

ಈ ಅಧಿವೇಶನ ಮುಗಿಯುವುದರೊಳಗಾಗಿ ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳೋಣ.

ಗಮನ ಸೆಳೆಯುವ ಸೂಚನೆ

(1) ಗದಗ ಎ.ಪಿ.ಎಂ.ಸಿ.ಯ ನೂತನ ಪ್ರಾಂಗಣಕ್ಕೆ ಹೆಚ್ಚಿನ ಸ್ಟ್ಯಾಂಪ್ ಡ್ಯೂಟಿ ವಸೂಲಿ ಮಾಡದೆ ನೊಂದಣಿ.

+ಶ್ರೀ ಡಿ.ಆರ್. ಪಾಟೀಲ್ (ಗದಗ ಕ್ಷೇತ್ರ) : ಮಾನ್ಯ ಅಧ್ಯಕ್ಷರೆ, ಗದಗ ಎ.ಪಿ.ಎಂ.ಸಿ.ಯು ತನ್ನ ನೂತನ ಪ್ರಾಂಗಣಕ್ಕೆ ವ್ಯವಹಾರವನ್ನು ಸ್ಥಳಾಂತರಿಸುವ ಸಲುವಾಗಿ ನೂರು ಎಕರೆ ಜಮೀನನ್ನು ಖರೀದಿಸಿ ಅದರಲ್ಲಿ ನಿವೇಶನ ರಚಿಸಿ ಸ್ವಲ್ಪ ಲಾಭಾಂಶ ಇಟ್ಟುಕೊಂಡು ಬೆಲೆಯನ್ನು ನಿರ್ಧರಿಸಿ ದಲ್ಲಾಳಿಗೆ ಹಾಗೂ ವರ್ತಕರಿಗೆ ಮಾರುಕಟ್ಟೆ ನಿರ್ದೇಶಕರ ಪೂರ್ವಾನುಮತಿಯೊಂದಿಗೆ ಹಂಚಲಾಗಿದೆ.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಸ್ವಾಭಾವಿಕವಾಗಿ ಈ ನಿವೇಶನ ದರ ಮಾರುಕಟ್ಟೆ ದರಗಳಿಗಿಂತ ಕಡಿಮೆಯಾಗಿದೆ. ಇದಕ್ಕೆ ಮಾರುಕಟ್ಟೆ ನಿರ್ದೇಶಕರ ಒಪ್ಪಿಗೆಯಿದೆ. ಈ ನಿಗದಿ ಬೆಲೆಯಿಂದ ಎ.ಪಿ.ಎಂ.ಸಿ.ಗೆ ಲಾಭವೂ ಆಗಿದೆ.